ವಿಷಯ : ಗ್ರಾಮ ಪಂಚಾಯಿತಿಗಳ ಸಂಖ್ಯೆ ಹಾಗೂ ಅವುಗಳಿಗೆ ಕೊಟ್ಟ ಹಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 430 (76)

ಶ್ರೀ. ಬಿ. ಎಸ್. ಯಡಿಯೂರಪ್ಪ. (ಶಿಕಾರಿಪುರ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು?

ಆ) ಈ ಗ್ರಾಮ ಪಂ.ಗಳಿಗೆ ಪ್ರತಿ ಪಂ. ಗೆ ಕಾನೂನು ಪ್ರಕಾರ ಒಂದು ಲಕ್ಷ ರೂ. ಮೊತ್ತ ಮತ್ತು 1993-94ರಲ್ಲಿ ನಿಡಲಾಗಿದೆಯೇ : ನೀಡಿದ್ದರೆ ಮೊತ್ತವೆಷ್ಟು?

ಇ) 1994-95ರಲ್ಲಿ ಕಾನೂನು ಪ್ರಕಾರ ಪ್ರತಿ ಪಂಚಾಯಿತಿಗಳಿಗೆ ಕೊಡಬೇಕಾದ ಒಂದು ಲಕ್ಷ ರೂ. ಮೊತ್ತ ಕೊಡಲಾಗಿದೆಯೇ, ಕೊಟ್ಟಿದ್ದಲ್ಲಿ ಜೂನ್ 1994 ರ ಕೊನೆಗೆ ಕೊಟ್ಟಿರುವ ಮೊತ್ತವೆಷ್ಟು ?

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಯವರು) :-

ಅ) ಗ್ರಾಮ ಪಂಚಾಯತ್	5640
ಮಧ್ಯಂತರ ಮಂ. ಪಂಚಾಯತ್	33
	5673

ಆ) ಎಲ್ಲಾ ಗ್ರಾ. ಪಂ.ಗಳಿಗೆ ಮಾರ್ಚಿ 1994ರವರೆಗೆ ಒಟ್ಟು ರೂ. 2345.24 ಲಕ್ಷ ತಲಾನುದಾನದ ರೂಪದಲ್ಲಿ ಬಿಡುಗಡೆ ಮಾಡಲಾಗಿದೆ. 1993ನೇ ಕರ್ನಾಟಕ ಪಂ. ರಾಜ್ ಅಧಿನಿಯಮದ ಪ್ರಕಾರ ಪ್ರತಿ ಗ್ರಾಮ ಪಂಚಾಯಿತಿಗೆ ರೂ. 1.00 ಲಕ್ಷ ವಾರ್ಷಿಕ ಅನುದಾನವನ್ನು 1994-95ನೇ ಸಾಲಿನಿಂದ ಬಿಡುಗಡೆ ಮಾಡಲಾಗುತ್ತಿದೆ.

ಇ) 1994-95ರ ಸಾಲಿಗೆ ಗ್ರಾ. ಪಂ.ಗಳಿಗೆ ಒಟ್ಟು ರೂ. 5673.00 ಲಕ್ಷ ಅಯವ್ಯಯದಲ್ಲಿ ಒದಗಿಸಿದ್ದು ಇದನ್ನು ವಾರ್ಷಿಕವಾಗಿ 4 ಕಂತುಗಳಲ್ಲಿ ಗ್ರಾ. ಪಂ.ಗಳಿಗೆ ಬಿಡುಗಡೆ ಮಾಡಲು ನಿರ್ಧರಿಸಲಾಗಿದ್ದು ಜೂನ್ 1994 ರ ಕೊನೆಯವರೆಗೆ 1418.25 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ವಿಷಯ : ನಿಗದಿತ ಹಾಗೂ ವಾಸ್ತವಿಕ ಆಯವ್ಯಯದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 432 (78)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92, 1992-93 ಮತ್ತು 1993-94ರಲ್ಲಿ ಒಟ್ಟಾರೆ ಆಯವ್ಯಯದಲ್ಲಿ ಆದಾಯಕ್ಕೆ ಹಾಗೂ ನಷ್ಟಕ್ಕೆ ನಿಗದಿಪಡಿಸಿದ ಮೊತ್ತವೆಷ್ಟು? ವಾಸ್ತವಿಕವಾಗಿ ಆಗಿರುವ ಆದಾಯ ಹಾಗೂ ಖರ್ಚು ಎಷ್ಟು?

ಆ) ಖರ್ಚಾಗದೆ ಉಳಿದಿರುವ ಹಾಗೂ ಆದಾಯದಲ್ಲಿ ಕಡಿಮೆಯಾಗಿರುವ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯಮಂತ್ರಿಗಳು) :-

(ಕೋಟಿ ರೂ.ಗಳಲ್ಲಿ)

	ಆದಾಯ		ಶೇಕಡ	ವೆಚ್ಚ		ಶೇಕಡ
ವರ್ಷ	ಆಯವ್ಯಯ ನಿಗದಿ	ವಾಸ್ತವಿಕ	ವಾರು ವ್ಯತ್ಯಾಸ	ಆಯವ್ಯಯ ನಿಗದಿ	ವಾಸ್ತವಿಕ	ವಾರು ವ್ಯತ್ಯಾಸ
1991-92	6471.95	5876.82	9.20	6596.74	6248.24	5.28
1992-93	7463.30	6731.47	9.80	7917.37	7457.73	5.80
1993-94	8790.62	9379.31 (ಪರಿಷ್ಕೃತ ಅಂದಾಜು 1983-94)	6.70	9289.97 (ಪರಿಷ್ಕೃತ ಅಂದಾಜು 1993-94)	9831.17	5.50

ವರ್ಷ	ಆದಾಯದಲ್ಲಾದ ಕಡಿಮೆ ಹಣ	ಖರ್ಚಾಗದೆ ಉಳಿದಿರುವ ಹಣ
		(ಕೋಟಿ ರೂ. ಗಳಲ್ಲಿ)
1991-92	595.13	348.50
1992-93	731.83	459.64
1993-94	588.69	541.20
	(ಕೋಟಿ ರೂ. ಗಳಷ್ಟು ಹೆಚ್ಚು ಆದಾಯ ನಿರೀಕ್ಷಿಸಲಾಗಿದೆ)	(ಕೋಟಿ ರೂ. ಗಳ ಹೆಚ್ಚುವರಿ ವೆಚ್ಚವನ್ನು ನಿರೀಕ್ಷಿಸಲಾಗಿದೆ)

ವಿಷಯ : ಅಬ್ಕಾರಿ ಗುತ್ತಿಗೆದಾರರಿಂದ ಬರಬೇಕಾಗಿರುವ ಬಾಕಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 433 (427)

ಶ್ರೀ. ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) :- ಮಾನ್ಯ ಅಬಕಾರಿ ಕಾರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬೊಕ್ಕಸಕ್ಕೆ ಅಬಕಾರಿ ಗುತ್ತಿಗೆ ದಾರರಿಂದ ಬರಬೇಕಾಗಿರುವ ಬಾಕಿಯ ಮೊತ್ತವೆಷ್ಟು ?